


◆ **ಇತ್ತೀಚಿಗೆ ಕುಪ್ಪಳ್ಳಿಯ ಕಮ್ಮಟದಲ್ಲಿ ನಿಮ್ಮನ್ನು ನೀವು 'ಮಾರ್ಕ್ಸಿಸ್ಟ್ ಕ್ರಿಟಿಕ್' ಅಂತ ಹೇಳಿಕೊಂಡ್ರಿ. ಈ ತರಹದ ಒಂದು ಸಂಬಂಧ ಎಲ್ಲಿ, ಯಾವಾಗ ಶುರುವಾಯಿತು? ಮಾರ್ಕ್ಸ್‌ವಾದಿ ಚಿಂತನೆ ನಿಮ್ಮ ವಿಮರ್ಶಾ ನೋಟಗಳನ್ನು ರೂಪಿಸಿಕೊಳ್ಳುವಲ್ಲಿ ಹೇಗೆ ನೆರವಿಗೆ ಬಂತು?**

ಇದಕ್ಕಾಗಿ ಸ್ವಲ್ಪ ಹಿಂದೆ ಹೋಗಬೇಕೇನೊ. ಎಪ್ಪತ್ತರ ದಶಕವಿದೆಯಲ್ಲ, ಅದು ಕುದಿಬಿಂದುವಿನ ಕಾಲ. 1971-75ರವರೆಗಿನ ತುರ್ತುಪರಿಸ್ಥಿತಿಯ ಕಾಲ ಅದು. ತುಂಬ ವಿಚಿತ್ರವಾದ ಕಾಲ. 1972ನೇ ಇಸ್ವಿಯಲ್ಲೇ ನಾನು ಕನ್ನಡ ವಿಭಾಗಕ್ಕೆ ಬಂದೆ. ನಾವು ಅನೇಕರು ಹಲವು ರೀತಿಯ ಪ್ರಭಾವಗಳಿಗೆ ಒಳಗಾದ ಕಾಲವದು. ಲೋಹಿಯಾವಾದದ ಪ್ರಭಾವ ಇತ್ತು. ಸಾಹಿತ್ಯದಲ್ಲಿ ನವ್ಯ ಚಳವಳಿಯ ಪ್ರಭಾವ ಇತ್ತು. ರಂಗಭೂಮಿಯಲ್ಲಿ ಕಾರಂತರು ಮತ್ತು ಇಬ್ರಾಹಿಂ ಅಲ್ಕಾಜಿ ಅವರ ಮಾರ್ಗಗಳಿದ್ದವು. ಆ ಕಾಲದಲ್ಲಿ ನಡೀತಿದ್ದ ಎಡಪಂಥೀಯ ಚಳವಳಿಯ ಗುಂಪೊಂದು ಕರ್ನಾಟಕದಲ್ಲಿ ಕ್ರಿಯಾಶೀಲವಾಗಿತ್ತು. ಆಂಧ್ರದ ನಕ್ಸಲೈಟ್‌ಗಳ ಜೊತೆ ಸಂಪರ್ಕ ಇಟ್ಟುಕೊಂಡಂಥ ಗುಂಪು ಈ ಕೆಲಸ ಮಾಡ್ತಿತ್ತು. ಅದರ ವೈಚಾರಿಕ ಚರ್ಚೆಯ ವ್ಯಾಪ್ತಿಯೊಳಗೆ ನಾವು ಕೆಲವರು ಬಂದಿದ್ವಿ. ಆ ಲಿಟರೇಚರನ್ನ ಓದಿದ್ವಿ, ಕ್ಲಾಸ್‌ಗಳನ್ನ ಅಟೆಂಡ್ ಮಾಡಿದ್ವಿ. ಅಂದ್ರೆ ಆ ಕಾಲಕ್ಕೆ ಸಿಪಿಎಂನವರು ಸ್ವಲ್ಪ ಕ್ರಿಯಾಶೀಲರಾಗಿದ್ರು. ಎಸ್‌ಎಫ್‌ಐ ಮೂಲಕ ಅಂಥ ಪ್ರಭಾವವನ್ನ ತರಲಿಕ್ಕೆ ಪ್ರಯತ್ನ ಮಾಡ್ತಿದ್ರು. ನಾನು ನೇರವಾಗಿ ಅದರ ಸದಸ್ಯ ಆಗದೇ ಇದ್ರೂ ಅದರ ಸಂಪರ್ಕದಲ್ಲಿದ್ದೆ. ನಕ್ಸಲ್ ಚಳವಳಿಯ ಸಾಹಿತ್ಯದ ಪ್ರಭಾವ ನನ್ನ ಮೇಲಿತ್ತು. ಆ ಕಾಲಕ್ಕೆ ಒಂದು ಪತ್ರಿಕೆಯನ್ನೂ ತರ್ತಾ ಇದ್ವಿ. 'ಶೂದ್ರ'ಕ್ಕೆ ಲೇಖನಗಳನ್ನು ಬೇರೆ ಹೆಸರಿನಲ್ಲಿ ಬರೀತಿದ್ದೆ. ಮಾರ್ಕ್ಸ್‌ವಾದವನ್ನು ಒಪ್ಪಿಕೊಂಡ ಹಲವು ದೃಷ್ಟಿಕೋನಗಳು ನನ್ನ ಲೇಖನದಲ್ಲಿ ಇದ್ವು. ಆದರೆ ಸಾಹಿತ್ಯ ಮತ್ತು ಮಾರ್ಕ್ಸ್‌ವಾದ ಈ ಸಂಬಂಧದಲ್ಲಿ ನನ್ನ ತಿಳಿವಳಿಕೆ ಹೆಚ್ಚಿದ್ದು 1975ರ ನಂತರದಲ್ಲಿ ನಾನು ಪಾಠ ಮಾಡಲು ಶುರುಮಾಡಿದಾಗ. ವಿಶೇಷವಾಗಿ ಪಾಶ್ಚಾತ್ಯ ಸಾಹಿತ್ಯವನ್ನು ಕಲಿಸ್ತಿದ್ದೆ. ಶೇಕ್ಸ್‌ಪಿಯರ್ ನಾಟಕಗಳನ್ನು ಪಾಠ ಮಾಡ್ತಿದ್ದೆ. ಯಾನ್ ಕಾಟ್ ಅಂತ ಒಬ್ಬ ಪೋಲಿಶ್ ವಿಮರ್ಶಕನಿದ್ದ. 'ಶೇಕ್ಸ್‌ಪಿಯರ್ ಅವರ್ ಕಂಟೆಂಪರರಿ' ಅನ್ನೋ ಕೃತಿಯನ್ನು ಬರೆದಿದ್ದ. ನನ್ಮೇಲೆ ತುಂಬಾ ಪ್ರಭಾವ ಬೀರ್‍ತು. ಕಾಕತಾಳೀಯ ಎಂಬಂತೆ 1986-87ರಲ್ಲಿ ಸ್ಟೋನಿ ಬ್ರೂಕ್ ಯುನಿವರ್ಸಿಟಿ